ಎಸ್.ಡಿ.ಯು.ಎ. ಹೆಚ್.ಇ.ಆರ್-ಸಾರ್ವಜನಿಕ ಶಿಕ್ಷಣ ಸರಣಿ



# ಶ್ರವಣ ಸಾಧನದ ಆರೈಕೆ ಮತ್ತು ನಿರ್ವಹಣೆ


ಮ ಅಭಿಜಿತ್

ಕೆ ಕೆ ಜೂಲಿಯ


ಮ ಜಯರಾಮ್

**ಶ್ರವಣ ಯಂತ್ರವು** ಶಬ್ದವನ್ನು ವರ್ಧಿಸಿ, ಕೇಳುವಂತೆ ಮಾಡಿ, ಶ್ರವಣ ಶಕ್ತಿಯನ್ನು ಸುಧಾರಿಸಲು ವಿನ್ಯಾಸಗೊಳಿಸಿದ ಒಂದು ಸಾಧನ.

ನಮ್ಮ ಜೀವನವನ್ನು ಸುಲಭಗೊಳಿಸುವಲ್ಲಿ ಸುಗಮಗೊಳಿಸುವಲ್ಲಿ ಹಾಗೂ ಜೀವನದ ಮಟ್ಟವನ್ನು ಸುಧಾರಿಸುವಲ್ಲಿ ತಂತ್ರಜ್ಞಾನವು ಪ್ರಮುಖ ಪಾತ್ರ ಹೊಂದಿದೆ. ಇದರಲ್ಲಿ, ಆಧುನಿಕ ಅಂಕೀಯ (ಡಿಜಿಟಲ್) ಶ್ರವಣ ಯಂತ್ರವೂ ಒಂದು.

ಇಂದಿನ ಡಿಜಿಟಲ್ ಶ್ರವಣ ಸಾಧನವನ್ನು, ನಮ್ಮ ಕೇಳುವಿಕೆಯ ಮಟ್ಟ, ಅದರ ಗುಣಲಕ್ಷಣಗಳು ಹಾಗೂ ಅದನ್ನು ಉಪಯೋಗಿಸುವವರ ಜೀವನಶೈಲಿಗೆ ಹೊಂದಿಕೊಳ್ಳುವಂತೆ ಯೋಜಿಸಬಹುದಾಗಿದೆ (ಪ್ರೋಗ್ರಾಮ್) ಮತ್ತು ಇದನ್ನು ಶ್ರವಣತಜ್ಞರು (ಆಡಿಯಾಲಜಿಸ್ಟ್) ನಿರ್ವಹಿಸುತ್ತಾರೆ.

## ನಿಮ್ಮ ಶ್ರವಣ ಸಾಧನದ ಭಾಗಗಳನ್ನು ತಿಳಿಯಿರಿ




### 1. ಬ್ಯಾಟರಿ ವಿಭಾಗ

ಬ್ಯಾಟರಿ ವಿಭಾಗವು ಶ್ರವಣ ಸಾಧನದ ಕಾರ್ಯನಿರ್ವಹಣೆಗೆ ಬೇಕಾದ ಶಕ್ತಿಯನ್ನು ಒದಗಿಸುತ್ತದೆ ಹಾಗೂ ಇದು ಆನ್ / ಆಫ್ ಸ್ವಿಚ್ ಆಗಿಯೂ ಸಹ ಕಾರ್ಯನಿರ್ವಹಿಸುತ್ತದೆ.

2. ಶಬ್ದ ನಿಯಂತ್ರಣ ಗುಂಡಿ

ಸುತ್ತಮುತ್ತಲಿನ ವಾತಾವರಣಕ್ಕೆ ಅನುಗುಣವಾಗಿ ಶಬ್ದವನ್ನು ಹೆಚ್ಚು ಅಥವಾ ಕಡಿಮೆ ಮಾಡಿಕೊಳ್ಳಲು ಬಳಕೆದಾರರಿಗೆ ಇದು ಅನುವು ಮಾಡಿಕೊಡುತ್ತದೆ.

3. ಪ್ರೋಗ್ರಾಮ್ ಗುಂಡಿ

ಬಳಕೆದಾರರು ಇರುವ ಸಂದರ್ಭಕ್ಕೆ ಅನುಗುಣವಾಗಿ ಹಾಗೂ ಅವರ ಆಲಿಸುವಿಕೆಯನ್ನು ಉತ್ತಮವಾಗಿಸಲು, ಶ್ರವಣ ಸಾಧನದಲ್ಲಿ ಹಲವಾರು ಯೋಜನೆಗಳಿವೆ (ಪ್ರೋಗ್ರಾಮ್) ಹಾಗೂ ಒಂದು ಯೋಜನೆಯಿಂದ ಇನ್ನೊಂದಕ್ಕೆ ಬದಲಾವಣೆ ಸಾಧ್ಯ.

4. ಮೈಕ್ರೋಫೋನ್

ಶ್ರವಣ ಸಾಧನದಲ್ಲಿ ಇರುವ ಮೈಕ್ರೊಫೋನ್ ಅನೇಕ ದಿಕ್ಕುಗಳಿಂದ ಬರುವ ಶಬ್ದವನ್ನು ಗ್ರಾಹಿಸಲು ಸಹಾಯ ಮಾಡುತ್ತದೆ.

5. ರಿಸೀವರ್

ರಿಸೀವರ್ ಅಂಕೀಯ ಮಾಹಿತಿಯನ್ನು ಶಬ್ದ ತರಂಗಗಳನ್ನಾಗಿ ಪರಿವರ್ತಿಸುತ್ತದೆ.


6. ಇಯರ್ ಹುಕ್

ಇಯರ್ ಹುಕ್ ಕಿವಿಯ ಅಚ್ಚಿನ ಒಂದು ಭಾಗವಾಗಿದ್ದು ಶ್ರವಣ ಸಾಧನವನ್ನು ಕಿವಿಯ ಮೇಲೆ ಅಲ್ಲಾಡದಂತೆ ಕೂರಿಸಲು ಸಹಾಯ ಮಾಡುತ್ತದೆ.

7. ಕಿವಿಯ ಅಚ್ಚು

ಕಿವಿಯ ಆಕಾರಕ್ಕೆ ಅನುಗುಣವಾಗಿ ಅಚ್ಚುಗಳನ್ನು ತಯಾರಿಸಲಾಗುತ್ತದೆ. ಇದು ಕಿವಿಯಹೊಳಗೆ ಧ್ವನಿಯ ರವಾನೆ ಮತ್ತು ಶ್ರವಣ ಸಾಧನದ ರಕ್ಷಣೆಗೂ ಸಹಾಯ ಮಾಡುತ್ತದೆ.


## ಶ್ರವಣ ಸಾಧನಗಳ ಜಾಗರೂಕತೆ




ಶ್ರವಣ ಸಾಧನವನ್ನು ಬಳಸದೇ ಇರುವಾಗ ಅಥವಾ ಪೆಟ್ಟಿಗೆಯಲ್ಲಿ ಇಡುವಾಗ, ಸಾಧನವನ್ನು ಆಫ್ ಮಾಡಿ ಇಡಬೇಕು.



ಮಕ್ಕಳು ಶ್ರವಣ ಸಾಧನವನ್ನು ಧರಿಸುವ ಮುನ್ನ ಅದು ಕೆಲಸ ಮಾಡುತ್ತಿದೆಯೇ ಎಂದು ಪರಿಶೀಲಿಸಿ.



ಕಿವಿ ಅಚ್ಚು / ಇಯರ್ ಟಿಪ್ ನಲ್ಲಿ ಗುಗ್ಗೆ ಸೇರದಂತೆ ಎಚ್ಚರವಹಿಸಿ.


ಆರ್ಐಸಿ / ಐಟಿಸಿ / ಸಿಐಸಿ ಇವು ಶ್ರವಣ ಸಾಧನಗಳ ಕೆಲವು ನಮೂನೆಗಳು. ಇವುಗಳಲ್ಲಿ ಗುಗ್ಗೆ



ಸೇರದಂತೆ ನೋಡಿಕೊಳ್ಳಿ ತುದಿಯಲ್ಲಿ ಒಂದು ಪರದೆ (ವ್ಯಾಕ್ಸ್ ಗಾರ್ಡ್) ಇರುತ್ತದೆ. ಇದನ್ನು ಎರಡು ತಿಂಗಳಿಗೊಮ್ಮೆ ಬದಲಾಯಿಸಿ.



ಶ್ರವಣ ಸಾಧನವನ್ನು ಶುಭ್ರ ಹಾಗೂ ನಯವಾದ ಹತ್ತಿಯ ಬಟ್ಟೆಯಿಂದ ಪ್ರತಿದಿನ ಒರೆಸಿ.



ಒಂದು ದಿನಕ್ಕಿಂತ ಹೆಚ್ಚು ಕಾಲ ಉಪಯೋಗಿಸದಿದ್ದರೆ, ಸಾಧನದಿಂದ ಬ್ಯಾಟರಿಯನ್ನು ಹೊರಗೆ ತೆಗೆಯಿರಿ.



ಶ್ರವಣ ಯಂತ್ರವನ್ನು ಕಿವಿಯಿಂದ ತೆಗೆದ ನಂತರ ಕಂಪನಿಯು ನೀಡಿದ ಪೆಟ್ಟಿಗೆಯಲ್ಲೇ ಇಡಿ.




ಬ್ಯಾಟರಿ ವಿಭಾಗದಲ್ಲಿ ತೇವಾಂಶವನ್ನು ತೆಗೆಯಲು ಬ್ಯಾಟರಿ ಬಾಗಿಲನು ತೆರೆದು ವಾರಕ್ಕೊಮ್ಮೆ ಡ್ರೈ ಎಯ್ಡ್ ಕಿಟ್‌ನಲ್ಲಿ ಇಡೀ (ಚಿತ್ರದಲ್ಲಿ ತೋರಿಸಿರುವಂತೆ).

ಕಿವಿಯ ಅಚ್ಚನ್ನು ವಾರಕ್ಕೊಮ್ಮೆ ಶುದ್ಧ ನೀರಿನಿಂದ ತೊಳೆಯಿರಿ.






ಶ್ರವಣ ಯಂತ್ರವನ್ನು ಬಳಸುವ ಮುನ್ನವಷ್ಟೇ, ಬ್ಯಾಟರಿಯ ಸ್ಟಿಕ್ಕರ್ ಅನ್ನು ತೆಗೆಯಿರಿ.

## ಮಾಡಿ


1. ನಿಮ್ಮ ಶ್ರವಣೋಪಕರಣವನ್ನು ತಂಪಾದ ಮತ್ತು ಒಣಗಿದ ಸ್ಥಳದಲ್ಲಿಡಿ
2. ನಿಮ್ಮ ಶ್ರವಣೋಪಕರಣವನ್ನು ಜೋಪಾನವಾಗಿ ನೋಡಿಕೊಳ್ಳಿ



3. ನಿಮ್ಮ ಶ್ರವಣೋಪಕರಣಕ್ಕೆ ಉಪಯೋಗಿಸುವ ಬ್ಯಾಟರಿಯನ್ನು ನಿಯಮಿತವಾಗಿ ಬದಲಾಯಿಸಿ
4. ನಿಮ್ಮ ಶ್ರವಣೋಪಕರಣವನ್ನು ವರ್ಷಕ್ಕೊಮ್ಮೆ ಸರ್ವೀಸ್ ಮಾಡಿಸಿ
5. ನಿಮ್ಮ ಶ್ರವಣಶಕ್ತಿಯನ್ನು ವರ್ಷಕ್ಕೊಮ್ಮೆಯಾದರು ಪರೀಕ್ಷಿಸಿಕೊಳ್ಳಿ



6. ನಿಮ್ಮ ಶ್ರವಣ ತಜ್ಞರ ಜೊತೆ ಸಂಪರ್ಕದಲ್ಲಿರಿ
7. ನಿಮ್ಮ ಕಿವಿ ಅಚ್ಚನ್ನು ಅವಶ್ಯಕತೆ ಇರುವಾಗ ಮಾತ್ರ ಬದಲಾಯಿಸಿ
8. ನಿಮ್ಮ ಕಿವಿಯನ್ನು ಸ್ವಚ್ಛವಾಗಿ ಇಟ್ಟುಕೊಳ್ಳಿ



9. ನಿಮ್ಮ ಶ್ರವಣೋಪಕರಣವನ್ನು ಸ್ವಚ್ಛವಾದ ಮತ್ತು ಒಣಗಿದ ಕೈಯಿಂದ ಮಾತ್ರ ಮುಟ್ಟಿರಿ/ಹಿಡಿದುಕೊಳ್ಳಿ

10. ನಿಮ್ಮ ಕಿವಿಯ ಅಚ್ಚು ನಿಮ್ಮ ಕಿವಿಗೆ ಸರಿಯಾಗಿ ಹೊಂದಿಕೊಳ್ಳುವುದೆಂದು ಖಾತ್ರಿ ಮಾಡಿಕೊಳ್ಳಿ



11. ನೀವು ಹೊಸ ಹೊಸ ಶ್ರವಣಯಂತ್ರಗಳ ನಮೂನೆಗಳ ಬಗ್ಗೆ, ಅವುಗಳ ಬೆಲೆಯಲ್ಲಿ ಆಗುವ ಬದಲಾವಣೆಗಳು ಮತ್ತು ಶ್ರವಣದೋಷವುಳ್ಳ ವ್ಯಕ್ತಿಗಳಿಗಾಗಿ ಇರುವ ಸರ್ಕಾರಿ ಯೋಜನೆಗಳ ಬಗ್ಗೆ ಮಾಹಿತಿ ಪಡೆದುಕೊಳ್ಳಿ



12. ನಿಮಗೆ ಶ್ರವಣೋಪಕರಣದ ಬಗ್ಗೆ ಯಾವುದಾದರೂ ಪ್ರಶ್ನೆ ಅಥವಾ ಸಂದೇಹ ಇದ್ದಲ್ಲಿ, ಅದನ್ನು ಒಂದು ಪುಸ್ತಕದಲ್ಲಿ ಬರೆದಿಟ್ಟುಕೊಳ್ಳಿ
13. ಹಾಗೆಯೇ ನೀವು ಉಪಯೋಗಿಸುವ ಶ್ರವಣೋಪಕರಣದ ಹೆಸರು, ಮಾಡೆಲ್ ಮತ್ತು ಸೀರಿಯಲ್ ನಂಬರ್ ಅನ್ನು ಬರೆದಿಟ್ಟುಕೊಳ್ಳಿ




14. ನಿಮ್ಮ ಹತ್ತಿರ ಯಾವಾಗಲೂ ಒಂದಕ್ಕಿಂತ ಹೆಚ್ಚು ಬ್ಯಾಟರಿಯನ್ನು ಇಟ್ಟುಕೊಳ್ಳಿ

## ಮಾಡಬೇಡಿ

1. ನಿಮ್ಮ ಶ್ರವಣೋಪಕರಣವನ್ನು ಗಟ್ಟಿಯಾದ ಜಾಗದ ಮೇಲೆ ಬೀಳಿಸಬೇಡಿ.
2. ನಿಮ್ಮ ಶ್ರವಣೋಪಕರಣವನ್ನು ಮಳೆಯಲ್ಲಿ ಅಥವಾ ನೀರಿನಲ್ಲಿ ಉಪಯೋಗಿಸಬೇಡಿ



3. ಮಕ್ಕಳಿಗೆ ಮತ್ತು ಸಾಕು ಪ್ರಾಣಿಗಳಿಗೆ ಸಿಗುವ ಹಾಗೆ ಶ್ರವಣೋಪಕರಣವನ್ನು ಇಡಬೇಡಿ
4. ನಿಮ್ಮ ಶ್ರವಣೋಪಕರಣವನ್ನು ಧೂಳು ಮತ್ತು ನೀರಿನಿಂದ ರಕ್ಷಿಸಿ

5. ನಿಮ್ಮ ಶ್ರವಣೋಪಕರಣವನ್ನು ಬಿಸಿಲಿನಲ್ಲಿ ಇಡಬೇಡಿ



6. ನಿಮ್ಮ ಶ್ರವಣೋಪಕರಣವನ್ನು ಎಲೆಕ್ಟ್ರಾನಿಕ್ ಸಾಧನಗಳ ಹತ್ತಿರ ಇಡಬೇಡಿ



7. ಕಿವಿ ಅಚ್ಚನ್ನು ಕಸ ಅಥವಾ ಗುಗ್ಗೆಯಿಂದ ಮುಚ್ಚದಂತೆ ನೋಡಿಕೊಳ್ಳಿ

8. ಮುರಿದ ಅಥವಾ ಸಡಿಲವಾದ ಸ್ವಿಚುಗಳನ್ನು ಮತ್ತು ಇತರ ಎಲೆಕ್ಟ್ರಾನಿಕ್ ತೊಂದರೆಗಳನ್ನು ನೀವೇ ರಿಪೇರಿ ಮಾಡಲು ಪ್ರಯತ್ನಿಸಬೇಡಿ



9. ಶ್ರವಣೋಪಕರಣವನ್ನು ಅಥವಾ ಕಿವಿಯಚ್ಚನ್ನು ರಾಸಾಯನಿಕ ಪದಾರ್ಥಗಳ ಹತ್ತಿರ ಇಡಬೇಡಿ


10. ಸೋರುತ್ತಿರುವ ಬ್ಯಾಟರಿಯನ್ನು ಶ್ರವಣಯಂತ್ರದ ಒಳಗೆ ಬಿಡಬೇಡಿ





11. ನಿಮ್ಮ ಕಿವಿಯ ಅಚ್ಚನ್ನು ಕಿವಿಯಿಂದ ಹೊರಗೆ ತೆಗೆಯಲು ತಂತಿ ಅಥವಾ ಟ್ಯೂಬನ್ನು ಹಿಡಿದು ಎಳೆಯಬೇಡಿ

12. ಕಿವಿ ಸೋರುವಾಗ ಶ್ರವಣೋಪಕರಣವನ್ನು ಉಪಯೋಗಿಸಬೇಡಿ






ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಿ:

**ವಾಕ್ ಶ್ರವಣ ವಿಭಾಗ**

ಶ್ರೀ ದೇವರಾಜ್ ಅರಸ್ ಉನ್ನತ ಶಿಕ್ಷಣ ಹಾಗೂ ಸಂಶೋಧನಾ ಸಂಸ್ಥೆ

ಟಮಕ ಕೋಲಾರ – 563 103

ಫೋನ್: 9448395231 (ext – 276), 08152243240

ಇಮೇಲ್ ಐಡಿ: spa@sduu.ac.in

ವೆಬ್ ಸೈಟ್: www.sduu.ac.in